ಕ್ಕದ್ದು. ಹಾಗೆ ಚಡ ದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಪೊಬಲಗನ್ನು ಕೊಡದೆ ತಪ್ಪಿದರೆ ಅವನ ಖ
ನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿ
ವ ನಷ್ಟಕ್ಕೆ ಅವನು ಗುರಿಯಾಗಿರಬೇಕು ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಮೂರು ಸಾಲ ಆಕಾರವಿಲ್ಲದೆ ಮುಫತ್ತು, 4ನೆ 5ನೆ
ಸಾಲ ಅರ್ಧ ಆಕಾರ, 6ನೆ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ್ ಈ ಮೇರೆ ಕೊಟ್ಟುಕೊಂಡು ಅನುಭವಿಸತ
ಕ್ಕದ್ದು. ಈ ರಿಯಾಯಿತಿ ಕೊಡುವದಕ್ಕೆ ಮುಂಜೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಕಿನ ಪ್ರದೇಶವನ್ನು ಸಾಗುವಳಿಗೆ ತರ
ಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವ
ನ್ನಾದರೂ ಫೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಮೂರು ಸಾಲ
ಲಾಗಾಯತು ಪೂರಾ ಆಕಾರ ಕೊಡಲಿಚ್ಛೆಯನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡ.	ದರಖಾಸ್ತು ಜಮೀನಿನ.	
				ವಿಸ್ತೀರ್ಣ.	ಆಕಾರ.
146	ವೆ॥ ಸಿ. ಎಸ್. ಕ್ಯಾಫರ್ಡ್ ಸಾಹೇಬರವರು.	ಅಡಿಗೆಪ್ಪಲು ಗ್ರಾಮ.	ಸರ್ವೆ ಪ್ರಕಾರ.	ಎ. ಗು. 60 19	...

ತಿಳುವಳಿಕೆ ಪರಾ :—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ವೆಟ್ ಪೈಸ ವಸೂಲಾದ್ದರಲ್ಲಿ ಕಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ವೆಟ್ ಪೈಸ ವಸೂಲೀ ಕೊಡುವುದಕ್ಕೇ ಆಗಲಿ ಕಮ್ಮಿ ಎಕರ ಸಂಬಂಧ ವಾಪಸು ಪಡೆಯುವದಕ್ಕೇ ಆ
ಗಲಿ ಜಮೀನ್ ಹಿಡುವಳಿದಾರನು ಬದ್ಧವಾಗಿರಬೇಕು.

ಬಿ. ಜೆ. ಕೊಮಾರಸ್ವಾಮಿ ನಾಯಕ್,
ಡಿಪ್ಯುಟಿ ಕಮಿಷನರ್.

ಅಮೃತಮಹಲ್ ಇಲಾಖೆ.

ಪ್ರಕಟನೆ.

(ಮೊಕ್ತಾಂ) ಹಾಸನ, ತಾರೀಖು 13–14ನೆ ನವೆಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಅಮೃತಮಹಲ್ ಇಲಾಖೆ ಬಾಬತ್ತು ಹೆಣ್ಣು ಮತ್ತು ಗಂಡು ರಾಸುಗಳನ್ನ ಚಾಲ್ತೀ ಇಸವಿ ಡಿಸೆಂಬರ್ ಮಾಹೆ 2ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ತಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಭಡ ಸವಾಲ್‌ನಿಂದ ಪಡೆಯ ಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರ್‌ಟೆಂಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ಯ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 366.

ಅರ್ಜಿದಾರರು ಬೀರೂರಿನಲ್ಲಿರುವ ಲೇಟ್ ವಿ. ಪಿ. ಸದಾಶಿವರಾವ್ ತಮ್ಮ ವೆಂಕೋಬರಾವ್ ಹೆಂಡತಿ ಸಂತೂಬಾಯಿ ಮೈನರಾದ
ಬೀರೂರು ಸ್ಥಳದ ಶ್ರೀಕಂಠರಾವ್ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ಶ್ರೀಕಂಠರಾವ್‌ಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೀರೂರು ಸ್ಥಳದ ಮೇಲ್ಕಂಡವರು ಸದರೀ ಮೈ
ನರಿನ ಆಸ್ತಿ ಕಾವಾಡುವದಕ್ಕೆ ಸರ್ಟಿಫಿಕೇಟ್ ಬ್ಯೈ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬ್ಯೈ ಸ್ಯ 1907ನೆ
ಇಸವಿ ಡಿಸೆಂಬರ್ ತಿಂಗಳ ತಾರೀಖು 6ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.
1907ನೆ ಇಸವಿ ಆಕ್ಟೋಬರ್ ತಿಂಗಳ 25ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನೊಡನೆ ಕೊಡೋ
ಣಾಗಿದೆ.